ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆ ಡಿವೋದಲ್ಲಿ ಕೆಲವು ಹೊಸಾರೇ ಜೀನಸ್ಸು ಹರಾಜಾಗತಕ್ಕ ವಿಚಾರ 22ನೆ ನಂಬರ್ ಮೈಸೂರು ಗೆಜೆಟ್ 2-6-04ನೆ ಮಾರ್ಕ್ಕಂ 325ನೆ ಪೇಜಿನಲ್ಲಿ ಫಾಯಿಷ್ ಮಾಡಿರುವ ವಿಷಯ ಎಲ್ಲಾ ಜನಗಳಿ ತಿಳುವಳಿಕೆ ಬಗ್ಗೆ ಪ್ರಸಿದ್ಧ ಪಡಿಸಿದೆ.

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮಾಗಡಿ ತಾಲ್ಲೂಕು ಗುಡೇಮಾರ್ನಹಳ್ಳಿ ಹೋಬಳಿ ಜೋಡಿ ಮುಮ್ಮನಹಳ್ಳಿ ಗ್ರಾಮವು ಸ೯ 1904ನೆ ಇಸವಿ ಜುಲೈ 11ನೆ ತಾರೀಖುನಲ್ಲಿ ಮಾಗಡಿ ತಾಲ್ಲೂಕು ಕಛೇರಿ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1904ನೆ ಇಸವಿ ಜೂ೯ ತಿಂಗಳು 2ನೆ ತಾರೀಖು 22ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 326ನೆ ಪುಟದಲ್ಲಿ ಫಾಯಿಷ್ ಆಗಿ ಇದೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮಾಗಡಿ ತಾಲ್ಲೂಕು ಗುಡೇಮಾರ್ನಹಳ್ಳಿ ಹೋಬಳಿ ಜೋಡಿ ಬೊಮ್ಮನಹಳ್ಳಿ ಗ್ರಾಮವು ಸ೯ 1904ನೆ ಇಸವಿ ಜುಲೈ 9ನೆ ತಾರೀಖುನಲ್ಲಿ ಮಾಗಡಿ ತಾಲ್ಲೂಕು ಕಛೇರಿಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1904ನೆ ಇಸವಿ ಜೂ೯ ತಿಂಗಳು 2ನೆ ತಾರೀಖು 22ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 327ನೆ ಪುಟದಲ್ಲಿ ಫಾಯಿಷ್ ಆಗಿ ಇದೆ.

ಸ೯ 1904ನೆ ಇಸವಿ ತಾರೀಖು.

ರಾಮಸ್ವಾಮಯ್ಯನಿಂದ ಸ೯ 1903--04ನೆ ಸಾಲಿನ ಕಂದಾಯ ಬಾಕಿ ಬಗ್ಗೆ ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ಮಾಳಿಗೊಂಡಹಳ್ಳಿ ಎಂಬ ಕಾಯಂಗುತ್ತಾ ಪೂರಾಗ್ರಾಮವನ್ನು ಬೆಂಗಳೂರು ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರ ರೂಬರೂಬ್ 1904ನೆ ಇಸವಿ ಜುಲೈ ತಾರೀಖು 11ನೆ ಸೋಮವಾರದ ದಿವಸ ದಿವಿ 11 ಘಂಟೆಗೆ ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುವುದು.

ತಪಶೀಲ್ 1904ನೆ ಜೂ೯ 2ನೆ ಮಾರ್ಕ್ಕಂ 22ನೆ ನಂಬರ್ ಮೈಸೂರು ಗೆಜೆಟ್ II ನೆ ಭಾಗದ 329ನೆ ಪುಟದಲ್ಲಿ ಫಾಯಿಷಾಗಿರುತ್ತೆ.

ಸ೯ 1904ನೆ ಇಸವಿ ತಾರೀಖು.

ರಾಮಚಂದ್ರರಾಯರಿಂದ ಸ೯ 1903—04ನೆ ಸಾಲಿನ ಕಂದಾಯ ಬಾಕಿ ಬಗ್ಗೆ ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ವಸಂತಪುರವೆಂಬ ಜೋಡಿ ಪೂರಾ ಗ್ರಾಮವನ್ನು ಬೆಂಗಳೂರು ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರ ರೂಬರೂಬ್ 1904ನೆ ಇಸವಿ ಜುಲೈ ತಾರೀಖು 9ನೆ ಶನಿವಾರದ ದಿವಸ ದಿವಿ 11 ಘಂಟೆಗೆ ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುವದು.

ತಪಶೀಲ್ 1904ನೆ ಜೂ೯ 2ನೆ ಮಾರ್ಕ್ಕಮಿನ 22ನೆ ನಂಬರ್ ಮೈಸೂರು ಗೆಜೆಟ್ II ನೆ ಭಾಗದ 328ನೆ ಪುಟದಲ್ಲಿ ಫಾಯಿಷ್ ಆಗಿರುತ್ತೆ.

ಡಿ. ದೇವರಾಜೆ ಅರಸ್,
ಡೆಪ್ಯೂಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ಇನ್ಸ್ಟಾಲ್ಮೆಂಟ್.

ತಾರೀಖು 19ನೆ ಮೇ 1904ನೆ ಇಸವಿ.

ಬವರಿಂಗ್‌ಪೇಟೆ ತಾಲ್ಲೂಕು ಬೇತಮಂಗಲದ ಹೋಬಳಿಗೆ ಸೇರಿದ ಜೋಡಿ ತಿಪ್ಪಬೋಯಿನಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರ ಬೇಕಾದ ಜೋಡಿ ಬಾಕಿಗೋಸ್ಕರವಾಗಿ, ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ, 1904ನೆ ಇಸವಿ ಜುಲೈ ಮೂಹೆ 20ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

(ಹೆಚ್ಚು ತಪಶೀಲ್ ಬಗ್ಗೆ 1904ನೆ ಜೂ೯ 2ನೆ ಮಾರ್ಕ್ಕಂ 22ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 333ನೆ ನಂಬರ್ ಪೇಜು ನೋಡತಕ್ಕದ್ದು.

ಕೆ. ಏ. ಪುಟ್ಟಣ್ಣ ಚೆಟ್ಟಿ,
ಡೆಪ್ಯೂಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 11ನೆ ಜೂ 1904.

ಚಾಮರಾಜನಗರ ತಾಲ್ಲೂಕಿಗೆ ಕೇರಿದ ಇನಾಂ ಸೋಮಸಮುದ್ರದ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಚಾಮರಾಜನಗರ ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1904ನೆ ಜುಲೈ 16ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚಿನ ತಪಸೀಲ್ ಬಗ್ಗೆ 2—6—1904ನೆ ಮಾರ್ಚ್ 22ನೆ ನಂಬರು ಗೆಜೆಟ್ಟಿನ 2ನೆ ಭಾಗದ 334ನೆ ನಂಬರು ಪೇಜು ನೋಡತಕ್ಕದ್ದು.

ತಾರೀಖು 11ನೆ ಜೂ 1904.

ಹುಣಸೂರು ತಾಲ್ಲೂಕಿಗೆ ಕೇರಿದ ಖಾಯಂಗುತ್ತಾ ಪಡೇರ ಜೊನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಹುಣಸೂರು ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1904ನೆ ಜುಲೈ 13ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚಿನ ತಪಸೀಲ್ ಬಗ್ಗೆ 2—6—1904ನೆ ಮಾರ್ಚ್ 22ನೆ ನಂಬರ್ ಗೆಜೆಟ್ಟಿನ 2ನೆ ಭಾಗದ 335ನೆ ನಂಬರು ಪೇಜು ನೋಡತಕ್ಕದ್ದು.

ತಾರೀಖು 11ನೆ ಜೂ 1904.

ನಾಗಮಂಗಲ ತಾಲ್ಲೂಕಿಗೆ ಕೇರಿದ ಜೋಡಿ ದೊಡ್ಡಗಟ್ಟ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ ನಾಗಮಂಗಲ ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1904ನೆ ಜುಲೈ ಮಾಹೆ 11ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚಿನ ತಪಸೀಲ್ ಬಗ್ಗೆ 2—6—1904ನೆ ಮಾರ್ಚ್ 22ನೆ ನಂಬರ್ ಗೆಜೆಟ್ಟಿನ 2ನೆ ಭಾಗದ 336ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 11ನೆ ಜೂ 1904.

ಹುಣಸೂರು ತಾಲ್ಲೂಕಿಗೆ ಕೇರಿದ ಜೋಡಿ ಅಲನಹಳ್ಳಿ ಗ್ರಾಮವು ಸರಕಾರಕ್ಕೆ ಬರಬೇಕಾದ ಜೋಡಿ ಬಾಕಿ ಗೋಸ್ಕರ ಹುಣಸೂರು ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1904ನೆ ಜುಲೈ 13ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚಿನ ತಪಸೀಲ್ ಬಗ್ಗೆ 2—6—1904ನೆ ಮಾರ್ಚ್ 22ನೆ ನಂಬರ್ ಗೆಜೆಟ್ಟಿನ 2ನೆ ಭಾಗದ 337ನೆ ನಂಬರ್ ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯೂಟಿ ಕಮ್ಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

ತಾರೀಖು 7ನೆ ಜೂ 1904.

1. ಕಂದಾಯದ ಬಾಕೀದಾರರಾದ ಹೆಗಲತ್ತಿ ಗ್ರಾಮದ ಸಾ ರಂಗಪ್ಪ ಬಾ|| ಗೋಪಾಲರಾವ್ ಇವರಿಂದ ಬರಬೇಕಾದ ಜಮೀರ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಆಫೀಸಿನಲ್ಲಿ ಡೆಪ್ಯೂಟಿ ಕಮಿಷನರವರಿಂದ 1904ನೆ ಆಗಸ್ಟ್ 5ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ಆ ದಿವಸ ಹಗಲು 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—1904ನೆ ಸಾಲ್ ಆಖೈರ್ ವರಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ಮೀಲ್ ಮೇರಿಗೆ 327—14—5 ರೂಪಾಯಿ ಆಗಿರುತ್ತೆ. ಚಾಲ್ತಿವರಿಗೆ ಬಡ್ಡಿ ಸಹಿತ ಬರಬೇಕು.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ವಿರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಮುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ವಿಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನೆ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 90 ದಿವಸಗಳಲ್ಲಿ ಗವರ್ನ್ಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವನ್ನು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲು. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ಸರ್ವೆ ನಂಬರ್ ಅಥವಾ ಜಮೀನಿನ ಹೆಸರು.	ಪಿಸ್ಕಲ್ ಹೆಸರಿ ಅಥವಾ ಬಾಗಾಯ್ತು ರುಜು.	ಸ್ವರ್ವೆ.	ವಿಸ್ತೀರ್ಣ.	ಅಕಾರ		ಸರ್ಕಾರಕ್ಕೆ ಬರಬೇಕಾದ ನೋಟ್ಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
					ರೂ. ಅ. ಪೈ.				ಎ. ಗು	ರೂ.	ಅ.	ಪೈ.	ರೂ. ಅ. ಪೈ.
ತೀರ್ಥಹಳ್ಳಿ.	ನಂದಗದ್ದೆ.	ಹೆಗಲಲ್ಲಿ.	ಸರಾಫ್ ರಂಗಪ್ಪ ಬಾಪ್ಪು ಗೋನ್ಸಲ್ರಾವ್. ...	ಪೂರಾ ಗ್ಯಾನು			ತರಿ		93 21	185	6	5	327 14 5
							ಖುಷ್ಕಿ ...		12 1	4	15	6	
							ಬಾಗಾಯತು		0 9	0	10	10	ಸ್ವತ್ತಿನ ಅಂದಾಜು ಕಿಮ್ಮತ್ತು 1,500
							ಕಾನು ...		1779 3	56	0	0	
									1884 34	247	0	9	
							ಜೋಡಿ ...			78	8	0	
							ಫಂಡು ...			15	7	1	
										93	15	1	

ಎಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಈಡೂರು ಡಿಸ್ಟ್ರಿಕ್ಟು.

ಇಸ್ತಿಹಾರು.

ಸ್ ೧೯೦೪ನೆ ಇಸವಿ ಮೇ ತಾರೀಖು 27.

ಚಿಕ್ಕಮಗಳೂರು ತಾಲ್ಲೂಕು ಮರ್ಲೆ ಹೋಬಳಿ ಜೋಡಿ ಹೆಜ್ಜಿಗೇನಹಳ್ಳಿ ಗ್ರಾಮಕ್ಕೆ 1903—1904ನೇ ಸಾಲಿಗೆ ಜೋಡಿದಾರ್ ಕೃಷ್ಣಾಚಾರ್ ಮತ್ತು ಸುಬ್ಬಣ್ಣಾಚಾರ್ ಇವರಿಂದ ಬರಬೇಕಾದ ಜೋಡಿ ಬಾಕಿಗಾಗಿ ಸದರಿ ಜೋಡಿ ಗ್ರಾಮವನ್ನು ಚಿಕ್ಕಮೆಗಳೂರು ಮೊಕ್ಕಾಂನಲ್ಲಿ ಡೆಪ್ಯುಟಿ ಕಮಿಷನರ್, ಅಥವಾ ಅದಕ್ಕಾಗಿ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರ ರೂಬು ರೂಬು ಸ್ ೧೯೦೪ನೇ ಇಸವಿ ಜುಲೈ ತಾರೀಖು 18ನೆ ಸೋಮವಾರ ದಿವಿ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಇನ್ನೂ ಜಾಸ್ತಿ ತಪಶೀಲು ತಿಳಿಯಬೇಕಾದವರು ಇದರ ಹಿಂದಿನವಾರದ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಆಗಿರುವ ಅಸಲ್ ಇಸ್ತಿಹಾರ್ನಾಸ್ಥೂ ಮೂಲಕ ತಿಳಿದುಕೊಳ್ಳಬಹುದು.

ಸ್ ೧೯೦೪ನೆ ಇಸವಿ ಮೇ ತಾರೀಖು 25.

ಅಜ್ಜಂಪುರದ ದೊಡ್ಡ ದೇವರಪ್ಪನವರಿಂದ ತರೀಕೆರೆ ತಾಲ್ಲೂಕು ಶಿವನೆ ಹೋಬಳಿ ಲಕ್ಷ್ಮೀಸಾಗರ ಜೋಡಿ ಗ್ರಾಮಕ್ಕೆ ಸ್ ೧೯೦೩—೦೪ನೆ ಸಾಲಿಗೆ ಬರಬೇಕಾದ ಕಂದಾಯದ ಬಾಕೀಗಾಗಿ ಲಕ್ಷ್ಮೀಸಾಗರ ಜೋಡಿ ಗ್ರಾಮವನ್ನು ತರೀಕೆರೆ ತಾಲ್ಲೂಕು ಆಫೀಸಿನಲ್ಲಿರುವ 1ನೆ ಆ॥ ಕ॥ ಸಾಹೇಬರವರ ರೂಬರೂಬ್ ಸ್ ೧೯೦೪ನೆ ಇಸವಿ ಜುಲೈ ತಾರೀಖು 15ನೆ ಶುಕ್ರವಾರ ದಿವಿ 11 ಘಂಟೆಗೆ ತರೀಕೆರೆ ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮಾಡಿಸಲ್ಪಡುತ್ತೆ. ಜಾಸ್ತಿ ತಪಶೀಲು ಇದರ ಹಿಂದಿನವಾರದ ಗೆಜೆಟ್ಟಿನಲ್ಲಿ ನಮೂದಿರುವುದನ್ನು ನೋಡಿದರೆ ತಿಳಿದುಬರುತ್ತೆ.

ತಾರೀಖು ನೆ ಸ ೧೯೦೪ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಮಗಳೂರು ತಾಲ್ಲೂಕು ಬಿದೆ) ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ ೧೯೦೪ನೆ ಇಸವಿ ಜುಲೈ ತಾರೀಖು 20ನೆ ಬುಧವಾರ ಹಗಲು 11 ಘಂಟೆಗೆ ಕಡೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷನರ ಸಾಹೇಬರವರ ಮಂಜೂರಾತಿಗೆ ಬಳಿ ಪಡಿಸಿ ಚಿಕ್ಕಮಗಳೂರು ತಾಲ್ಲೂಕು ಅಮಲೆಪಾರ್ಸ ರೂಬರೂ ಚಿಕ್ಕಮಗಳೂರು ಕೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ನಾಮೂಲ್ ಪರಿಮ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಸುತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು ಅಪ್ಸೆಟ್ ಪ್ರೈಸ್ ಪೈ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ನೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗೂ ಭರ್ತಿಗೆ ಜವಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಮೂರೂ ಶೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ನೇಕಡಾ 25 ರೂಪಾಯಿಗಳ ಮೇರೆ ಆಗುವ ಶೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೆ ದಿವಸದಲ್ಲಿ ನಮೂದಾಗಿರುವ ಸಂದರ್ಭಾನುಸಾರ ಮೂರೂ ಡಿಪಾಜಿಟ್ ಮೊಬಲಗಿನ ಭರ್ತಿಗೆ ವಳಪಟ್ಟು ಆಖೈರ್ ಚಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತನಯಕ್ಕೆ ಮುಂಚಿಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕೀ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು.

5. ಈ ನಿಬಂಧನೆಗಳಿಗೆ ಒಳಪಟ್ಟು ಹರಾಜಾದ ಜಮೀನನ್ನು ಪೂರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೆ 5ನೆ ಸಾಲ್ ಅರ್ಧ ಆಕಾರ 6ನೆ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕ್ಕೊಂಡು ಅನುಭವಿಸತಕ್ಕದ್ದು. ಈ ರಿಯಾಯಿತು ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟೂವನ್ನು ಕತರಾಯಿಸಿಕೊಂಡೇ ಆಗಲಿ ಅವರಲ್ಲಿ ಯಾವಭಾಗವ ನ್ನಾದರೂ ಸೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಪೂರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು:—

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಹದ್ದಿ.	ದರಖಾಸ್ತು ಜಮೀನಿನ. ವಿಸ್ತೀರ್ಣ. ಆಕಾರ.	ಪೂರಾ.
23 ಮುಖ್ಯ 221	ಉಪಸ್ಕರ ಎಳ್ಳೆಪ್ಪ ಮಗ ಡಪ್ಪಿಯು. ಎಲ್. ಕಾಫೀಡು ಸಾಹೇಬರವರು	ಬಿದರೆ ಗ್ರಾಮದಲ್ಲಿ	ಸರ್ವೆ ನಂ. 23 ಸರ್ವೆ ನಂ. 224 ಜುಮ್ಲಾ ...	10-38 53-19 64-17	

ತಿಳುವಳಿಕೆ ಪೂರಾ :—ಒಂದು ಸರ್ವೆ ನಂಬರು ಪೈಕಿ ಕೆಲವು ಜಾಗಕ್ಕೆ ದರಖಾಸ್ತು ಬಂದು ಕಟ್ಟಿಸಿ ಆಳತೆ ಪ್ರಕಾರ ಅಂದಾಜು ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕಾರುಬಾರಾಕಾ ಪೋಜೆಣೀ ಎಕರಿಗೆ ಗಣನೀಯವಾದಷ್ಟು ಕಮ್ತಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ತಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀ ಹಿಡುವದಾರನು ಒಪ್ಪ ಅರ್ಹನಾಗಿರಬೇಕು.

ಎಂ. ನಾರಾಯಣರಾವ್,
ಡೆಪ್ಯೂಟಿ ಕಮಿಷನರ.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಡೂರು ಡಿಸ್ಟ್ರಿಕ್ಟ್ ತರೀಕೆರೆ ತಾಲ್ಲೂಕು ತರೀಕೆರೆ ಈಸ ಬಾ ಮಾರ್ಕೆಟ್ಟಿನಲ್ಲಿ ಸ೯ 1904ನೆ ಇಸವಿ ಜುಲೈ 1ರ ಲಾಗಾಯತು ಸ೯ 1905ನೆ ಇಸವಿ ಜೂ೯ ಆಖೈರು ವರಿಗೆ ತೆರಿಗೆ ವಸೂಲು ಮಾಡುವ ಹಕ್ಕುದಾರಿಯನ್ನು ತರೀಕೆರೆ ತಾಲ್ಲೂಕು ಕಚೇರಿಯಲ್ಲಿ ಆ ತಾಲ್ಲೂಕು ಅಮಲ್‌ದಾರ್‌ರವರಿಂದ ಸ೯ 1904ನೆ ಇಸವಿ ಜೂ೯ 25ನೆ ಶನಿವಾರ ದಿವಿ 11 ಘಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಬಾಕೀ ತಪಶೀಲುಗಳನ್ನು ತಾರೀಖು 9—6—1904ನೆ ಮಾರ್ಚ್ ನಂಬರ್ 23ನೆ ಮೈಸೂರು ಗೆಜೆಟ್ಟಿನ IIನೆ ಭಾಗದ 360ನೆ ಪುಟದಲ್ಲಿ ಘಾಯಿಷ್ ಮಾಡಿರುತ್ತೆ.

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ ಗೋಷ್ವಾರೆ.

ಚಿತ್ರದುರ್ಗ, ತಾರೀಖು 9ನೆ ಜೂ೯ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಚಿತ್ರದುರ್ಗ ಡಿಸ್ಟ್ರಿಕ್ಟ್ ಚಿತ್ರದುರ್ಗ ತಾಲ್ಲೂಕು ಕಸವನ ಹಳ್ಳಿ, ಮಾಳೇನಹಳ್ಳಿ, ವಡ್ಡಿನಹಳ್ಳಿ ಈ ಜೋಡಿ ಮತ್ತು ಖಾಯಂಗುತ್ತಾ ಗ್ರಾಮಗಳಲ್ಲಿ ಸುಬ್ಬಾಯಶಾಸ್ತ್ರಿ ವಗೈರೇರಿಗೆ ಇರುವ ಹಕ್ಕು ಬಾಧ್ಯತೆಯನ್ನು 1902—1903ನೆ ಸಾಲಿನ ಕಂದಾಯದ ಬಾಕೀಗಾಗಿ ಚಿತ್ರದುರ್ಗದ ತಾಲ್ಲೂಕು ಕಚೇರಿಯಲ್ಲಿ, 1904ನೆ ಜೂ೯ 28, 29, 30ನೆ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಜಾಸ್ತಿ ತಪಶೀಲು 9—6—1904ನೆ ಮಾರ್ಚ್ 23ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 361ನೆ ಪುಟದಲ್ಲಿ ನಮೂದಾಗಿರುವದನ್ನು ನೋಡಲಾಗಿ ತಿಳಿಯಲಾಗುತ್ತೆ.

ತಾರೀಖು 8ನೆ ಜೂ೯ 1904.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಹರಿಹರದ ನೇತುವೆಯ ಮೇಲೆ 1904ನೆ ಜುಲೈ ಗುರ್ರೆ ಲಾಗಾಯಿತು 1905ನೆ ಜೂ೯ ಆಖೈರು ವರಿವಿಗೆ ಹನ್ನೆರಡು ತಿಂಗಳ ಕಾಲ ಸುಂಕವನ್ನು ವಸೂಲ್ಮಾಡುವ ಹಕ್ಕನ್ನು ಹರಿಹರದ ಸಬ್ ತಾಲ್ಲೂಕು ಕಚೇರಿಯಲ್ಲಿ 1904ನೆ ಇಸವಿ ಜೂ೯ ತಾರೀಖು 20ನೆ ದಿವಸ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರ ಅಥವಾ ಅವರಿಂದ ಅಧಿಕಾರ ಹೊಂದಿದ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ ರೂಬು ರೂಬ್ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಹರಾಜು ಷರತ್ತುಗಳು ಮತ್ತು ಇತರ ತಪಶೀಲುಗಳನ್ನು 31—5—1904ನೆ ತಾರೀಖಿನ ಇಸ್ತಿಹಾರ್‌ನಾಮೆಯಲ್ಲಿ ಘಾಯಿಷ್ ಮಾಡಿರುತ್ತೆ. ಸದರಿ ಇಸ್ತಿಹಾರ್‌ನಾಮೆಯು ಮೈಸೂರು ಗೆಜೆಟ್ IIನೆ ಭಾಗದ 362ನೆ ಪುಟದಲ್ಲಿ ಘಾಯಿಷ್ ಆಗಿರುತ್ತೆ.

ಹೆಚ್. ರಾಮಾನುಜಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿವೀಜ್ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ೯ 1903—1904ನೆ ಇಸವಿ ಮಿಃ ಅರ್ಜೀ ನಂಬರ್ 384.

ಮೃತಪಟ್ಟ ಎಂ. ನಂಜುಂಡಶಾಸ್ತ್ರಿಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ಅರಳೀಪೇಟೆಯಲ್ಲಿ ಇರುವ ಅಕ್ಕಯ್ಯಮ್ಮ ಎಂಬುವರು, ಮೃತಪಟ್ಟ ಸದರೀ ಎಂ. ನಂಜುಂಡಶಾಸ್ತ್ರಿಯವರಿಗೆ ಮುಖ್ಯ ವಾರಸುದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಎಂ. ನಂಜುಂಡಶಾಸ್ತ್ರಿಯವರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ೯ 1901ನೆ ಇಸವಿ 7ನೆ ರೆಗ್ಯುಲೇಷ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಕ್ಕಯ್ಯಮ್ಮ ಎಂಬುವರ ಅರ್ಜಿಯನ್ನು ಸ೯ 1904ನೆ ಇಸವಿ ಜುಲೈ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಂ. ನಂಜುಂಡಶಾಸ್ತ್ರಿಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ರರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ೯ 1904ನೆ ಇಸವಿ ಜೂ೯ ತಿಂಗಳು ನೆ ತಾರೀಖಿನಲ್ಲಿ ಕೋರ್ಟ್ ವೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಸಾಗಿದೆ.